# ಸಿನಿಮಾ ಪದ್ಯಾವಳಿಗಳ ನೆನಪು ನೇವರಿಕೆ

■ ರಮೇಶ್ ರಾವ್ ಕೈಕಂಬ



ಎರಡೂವರೆ ಮೂರು ದಶಕಗಳ ಹಿಂದೆ ಹೊಸ ಸಿನಿಮಾಗಳು ತೆರೆಕಂಡಾಗ, ಆ ಸಿನಿಮಾಗಳಿಗೆ ಸಂಬಂಧಿಸಿದ ಮಾಹಿತಿ ಹಾಗೂ ಗೀತೆಗಳ ಸಾಹಿತ್ಯವನ್ನೊಳಗೊಂಡ ಕಿರುಪುಸ್ತಿಕೆಗಳು ಅಥವಾ ಮಡಚಬಹುದಾದ ಪೋಸ್ಟರ್‌ಗಳ ರೂಪದ ಪ್ರಕಟಣೆಗಳು ಬಿಡುಗಡೆಯಾಗುತ್ತಿದ್ದವು. ಮಡಿಚಿ ಜೇಬಿನಲ್ಲಿರಿಸಿಕೊಳ್ಳಬಹುದಾದ ಅವುಗಳನ್ನು ಪದ್ಯಾವಳಿಗಳು ಎನ್ನಬಹುದೇನೊ? ಹೊಸ ಸಿನಿಮಾ ನೋಡಿದಷ್ಟೇ ಅವುಗಳಿಗೆ ಸಂಬಂಧಿಸಿದ ಕಿರುಪುಸ್ತಿಕೆಗಳನ್ನು ಕೊಂಡು ಸಂಗ್ರಹಿಸುವುದು ಚಿತ್ರರಸಿಕರ ಪಾಲಿಗೆ ನೆಚ್ಚಿನ ಹವ್ಯಾಸವಾಗಿತ್ತು.

ತೆರೆಗೆ ಬರುವ ಎಲ್ಲ ಸಿನಿಮಾಗಳನ್ನು ವೀಕ್ಷಿಸುವುದು ಸಾಧ್ಯವೇ? ಸಿನಿಮಾ ನೋಡದಿದ್ದರೂ ಚಿತ್ರಮಂದಿರಗಳ ಬಳಿ ಇರುತ್ತಿದ್ದ ಅಂಗಡಿಗಳಿಗೆ ತೆರಳಿ ಹಾಡಿನ ಪುಸ್ತಕಗಳನ್ನು ಖರೀದಿಸುವವರ ಸಂಖ್ಯೆ ದೊಡ್ಡದಿತ್ತು. ಹೆಣ್ಣುಮಕ್ಕಳ ನಡುವೆ ಈ ಪುಸ್ತಕಗಳು ವಿನಿಮಯಗೊಳ್ಳುತ್ತಿದ್ದವು. ಹಾಡಿನ ಪುಸ್ತಕಗಳನ್ನು ಹೊಂದುವುದು ಚಿತ್ರರಸಿಕರ ಪಾಲಿಗೆ ಹೆಮ್ಮೆಯ ವಿಷಯವಾಗಿರುತ್ತಿತ್ತು. ಕೆಲವರು ತಮ್ಮ ಇಷ್ಟದ ಹಾಡುಗಳನ್ನು ನೋಟ್ ಪುಸ್ತಕಗಳಲ್ಲಿ ಬರೆದಿಟ್ಟುಕೊಳ್ಳುತ್ತಿದ್ದರು.

ಚಿತ್ರಮಂದಿರಗಳಲ್ಲಿ ಸಿನಿಮಾ ಆರಂಭಕ್ಕೆ ಮುನ್ನ ಹಾಗೂ ಇಂಟರ್ವಲ್ ಸಮಯದಲ್ಲಿ 'ಪದ್ಯಾವಳಿ ಪದ್ಯಾವಳಿ' ಎಂದು ಕೂಗುತ್ತ ಪುಸ್ತಕ ಮಾರುವ ಹುಡುಗರು ಕಾಣಿಸಿಕೊಳ್ಳುತ್ತಿದ್ದರು. ಐವತ್ತು ಪೈಸೆ ಅಥವಾ ರೂಪಾಯಿಗೊಂದು ಪುಸ್ತಕ. ಆ ಪದ್ಯಾವಳಿಗಳ ಮೇಲೆ ನೆಚ್ಚಿನ ತಾರೆಯರ ಆಕರ್ಷಕ ಚಿತ್ರಪಟಗಳಿರುತ್ತಿದ್ದವು. ರಾಜ್‌ಕುಮಾರ್ ಸಿನಿಮಾಗಳ ಪದ್ಯಾವಳಿಗಳಂತೂ ಬಿಸಿದೋಸೆಯಂತೆ ಖರ್ಚಾಗುತ್ತಿದ್ದವು. ತಾರಾ ವರ್ಚಸ್ಸಿನ ನಟರ, ಗ್ರೀಟಿಂಗ್ ಕಾರ್ಡ್ ರೂಪದ ಫೋಟೊಗಳಿಗೂ ಬೇಡಿಕೆಯಿತ್ತು

ಐದಾರು ಪುಟಗಳಿರುತ್ತಿದ್ದ ಆ ಕಿರುಪುಸ್ತಕಗಳಲ್ಲಿ ಚಿತ್ರದ ಕಥೆಯ ಮುಖ್ಯಾಂಶವೂ ಇರುತ್ತಿತ್ತು. ಆ ಕಥೆ ಸಿನಿಮಾದ ಬಗ್ಗೆ ಕುತೂಹಲ ಕೆರಳಿಸುವಂತೆ ಅಪೂರ್ಣವಾಗಿರುತ್ತಿತ್ತು. ಚಿತ್ರದ ಎಲ್ಲಾ ಹಾಡುಗಳ ಸಾಹಿತ್ಯ, ಚಿತ್ರಕ್ಕಾಗಿ ದುಡಿದಿರುವ ಸರ್ವಕಲಾವಿದರ ಹಾಗೂ ತಾಂತ್ರಿಕ ವರ್ಗದವರ ಹೆಸರುಗಳನ್ನು ಆ ಪುಸ್ತಕಗಳಲ್ಲಿ ಮುದ್ರಿಸಲಾಗುತಿತ್ತು.

ಈಗ ಪದ್ಯಾವಳಿಗಳ ಕಾಲ ಮುಗಿದಿದೆ. ಕ್ಯಾಸೆಟ್‌ಗಳ ಕಾಲವೇ ಮುಗಿದಿರುವಾಗ, ಹಾಡಿನ ಪುಸ್ತಕಗಳಿಗೆ ಜಾಗವೆಲ್ಲಿ? ಸಿನಿಮಾ ಗೀತೆಗಳ ಹಳೆಯ ಪುಸ್ತಕಗಳನ್ನು ಕೈಯಲ್ಲಿ ಹಿಡಿದರೆ ಈಗಲೂ ಮಧುರ ನೆನಪುಗಳು ಆವರಿಸಿಕೊಳ್ಳುತ್ತವೆ, ಕಣ್ಣ ಮುಂದೆ ಸಿನಿಮಾ ರೀಲುಗಳು ಸುಳಿದಾಡತೊಡಗುತ್ತವೆ. ಅಂದಿನ ಸಿನಿಮಾ ಸಂಭ್ರಮ ಈಗೆಲ್ಲಿ? ಈಗೇನಿದ್ದರೂ ಅಂತರ್ಜಾಲದ ಜಮಾನ. ಗೂಗಲ್‌ನಲ್ಲಿ ಎಲ್ಲವೂ ಲಭ್ಯ ಎನ್ನುವ ಮನೋಭಾವ ಇಂದಿನ ಸಿನಿಮಾ ಮಂದಿಗೆ.

■